ಜಯದೇವ ಹಲಕಿ, ಗೋಕಾಕ
*ಸಚಿವರೊಬ್ಬರು ಸ್ಮಶಾನದಲ್ಲಿ ವಾಸ್ತವ್ಯ ಮಾಡಿದರಲ್ಲ ರಾಮ್‌ಜೀ?*



ಸ್ಮಶಾನ ಭಾಗ್ಯ! ಜನರಿಗೆ ಸತ್ತ ಬಳಿಕವಾದರೂ ಜಾಗ ಸಿಗಬಹುದೆ?

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಸರ್ಕಾರಿ ಕಟ್ಟಡ ಉದ್ಘಾಟನೆ ಮಾಡಿದವರ ಹಸ್ತಕ್ಕೇಕೆ 'ಅಮೃತ ಹಸ್ತ' ಎಂದು ಹಾಕಿರುತ್ತಾರೆ?*
ಅಮ್ – ಸ್ವಲ್ಪವೇ, ಋತ – ಕರ್ಮಫಲ ಇರುವಂತಹ ಹಸ್ತ ಉರುಫ್ ಹೆಚ್ಚು ಕೆಲಸ ಮಾಡದ ಕೈ ಎಂದು ಅರ್ಥವಂತೆ!

ಉಷಾ ಸೋಗಲ್, ತುರಹಳ್ಳಿ
*ಕಾಣುವ ದೈವಕ್ಕೆ ಹೆದರದ ಮನಸ್ಸು ಕಾಣದ ದೆವ್ವಕ್ಕೆ ಯಾಕೆ ಹೆದರುತ್ತದೆ?*
ದೈವ ಅಡ್ವರ್ಟೈಸ್‌ಮೆಂಟ್ ಮೂಲಕ ಒಳ್ಳೆಯದೆಂದು ಪರಿಚಿತವಾದ brand, ದೆವ್ವ unknown brand ಆದ್ದರಿಂದ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಸದನದಲ್ಲಿ ಕಡಿಮೆ ಹಾಜರಾತಿ ಹೊಂದಿರುವ ಶಾಸಕರಿಗೆ ಏನು ಶಿಕ್ಷೆ ಕೊಡಬೇಕು?*




80%ಗಿಂತ ಕಡಿಮೆಯಿದ್ದರೆ ಚುನಾವಣೆಗೆ ನಿಲ್ಲುವಂತಿಲ್ಲ ಎನ್ನಿ; ರಗ್ಗು, ಹಾಸಿಗೆ ತಂದು ಸದನದಲ್ಲೇ ಝಾಂಡಾ ಹೂಡಿಬಿಡುತ್ತಾರೆ.

ನಾಗಮಣಿ ಸೋಮಶೇಖರ್, ಮೈಸೂರು
*ನಮ್ಮ ದೇಶದಲ್ಲೇಕೆ ನೂರೆಂಟು ದೇವರುಗಳು, ನೂರೆಂಟು ದೇವಸ್ಥಾನಗಳು?*
ದಾಹಕ್ಕೊಂದು, ಮೋಹಕ್ಕೊಂದು, ದೇಶಕ್ಕೊಂದು, ದ್ವೇಷಕ್ಕೊಂದು, ದೇಹಕ್ಕೊಂದು, ವಿವಾಹಕ್ಕೊಂದು, ವಿವಾದಕ್ಕೊಂದು...

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ರೊಟ್ಟಿಗೆ ಹಸಿದವರಿಗಿಂತ ಪ್ರೀತಿಗೆ ಹಸಿದವರ ಸಂಖ್ಯೆಯೇ ಜಗತ್ತಿನಲ್ಲಿ ಜಾಸ್ತಿ ಇರುವುದು ಏಕೆ?*
ಪ್ರೀತಿ ದರ್ಶಿನಿಗಳಲ್ಲಿ, ಖಾನಾವಳಿಗಳಲ್ಲಿ, ಹೊಟೆಲ್‌ಗಳಲ್ಲಿ ದೊರಕದಲ್ಲ!

ಬಿ.ಆರ್. ಸುರೇಶ್, ಶಿವಮೊಗ್ಗ
*ನಾನು ನನ್ನವಳೊಬ್ಬಳನ್ನು ಬಿಟ್ಟು ಬೇರಾವ ಹೆಣ್ಣನ್ನೂ ಕಣ್ಣೆತ್ತಿ ನೋಡದಿದ್ದರೂ ನನ್ನವಳು ನನ್ನನ್ನು ಪ್ರತಿದಿನ ಅನುಮಾನಿಸುತ್ತಾಳಲ್ಲಾ...?*
ನೀವು 'ಕಣ್ಣೆತ್ತಿ ನೋಡುವುದಿಲ್ಲ' ಎಂದುದೇ ಆಕೆಯ ಅನುಮಾನಕ್ಕೆ ಕಾರಣ – ಯಾವುದೋ ಗಿಡ್ಡ ಹುಡುಗಿಯನ್ನು ನೋಡುತ್ತಿದ್ದೀರೆಂದು!

ಮಹಾವೀರ ಕಾಸರ, ಶಿವಮೊಗ್ಗ
*ಹುಡುಗ ಡ್ರೈವರ್, ಹುಡುಗಿ ಕಂಡಕ್ಟರ್ ಆದರೆ ಹೇಗಿರುತ್ತೆ?*
ಚಿಲ್ಲರೆ ವಿಷಯಗಳಿಗೆ ಜಗಳವಾಡದೆ ಹೊಂದಿಕೊಂಡುಹೋಗುತ್ತಾರೆ.

ಸಂತೇಬೆನ್ನೂರು ಫೈಜ್ನಟ್ರಾಜ್, ದಾವಣಗೆರೆ
*ಸಾಯೋದು ಗೊತ್ತಿದ್ದೂ ಸಾಧಿಸೋ ಮಾನವನ ಛಲಕ್ಕೆ ಏನಂತೀರಾ ಬಾಸ್?*
ದುರ್ಯೋಧನನ ಛಲವೇ ಗೀತೆಯ ಉಗಮಕ್ಕೆ ಕಾರಣ. ಛಲ ಬೇಕು ಮನುಜಂಗೆ!

ರಮೇಶ ಜ ಬೊಂಗಾಳೆ, ಬೈಲಹೊಂಗಲ
*ನಾಯಿಗೆ ಒಂದು ತುಂಡು ಬ್ರೆಡ್ ಹಾಕಿದರೆ ಎಷ್ಟೋ ವರ್ಷ ನೆನಪಿಡುತ್ತದೆ. ಆದರೆ ಮನುಷ್ಯ?*
ಒಳ್ಳೆಯ ಬ್ರೆಡ್ ಕೊಡದೆ ಹಳಸಿದ, ಒಣಗಿದ, ಬೆಂಡಾದ ಬ್ರೆಡ್ ಕೊಟ್ಟುನೋಡಿ. ನಿಮ್ಮನ್ನು ಜೀವಮಾನ ಪೂರ್ತಿ ಮರೆಯಲ್ಲ.

ವೈ.ಧನಪಾಲ ಪ್ರಸಾದ್, ಮಂಡ್ಯ
*ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಭಾರತದಲ್ಲೇ ಇರುವಾಗ ಹೆಚ್ಚಿನ ಚಿಕಿತ್ಸೆಗೆ ವಿದೇಶಕ್ಕೆ ಏಕೆ?*
ಇಂಗ್ಲಿಷ್ ಮೆಡಿಸಿನ್ ಆದ್ದರಿಂದ ಇಂಗ್ಲಿಷ್ ದೇಶದಲ್ಲೇ ಹೆಚ್ಚು ಪ್ರಭಾವಶಾಲಿ ಎಂದು ತಿಳಿದಿರುವರಂತೆ!

ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ
ಆನೆಯ ನಿಯಂತ್ರಣಕ್ಕೆ ಅಂಕುಶ, ಕುದುರೆಗೆ ಚಾಟಿ, ಎತ್ತುಗಳಿಗೆ ಬಾರುಕೋಲು; ರಾಜಕಾರಣಿಗಳ ನಿಯಂತ್ರಣಕ್ಕೆ?
ಕ್ಷಮಿಸಿ. ಪ್ರಾಣಿಗಳನ್ನು ಮಾತ್ರ ನಿಯಂತ್ರಿಸಬಹುದು. ಪ್ರಾಣಿಗಳಿಗಿಂತ ಕೀಳಾದುದನ್ನು ನಿಯಂತ್ರಿಸಲು ಸಾಧ್ಯವಿಲ್ಲ.

## ಬಹುಮಾನಿತ ಪ್ರಶ್ನೆ

ಚೈತ್ರಾ ಕುಕ್ಕೆಮನೆ, ಬೆಂಗಳೂರು
*ನಿಮಗೆ ಒಂದು ಸಿನಿಮಾಕ್ಕೆ ಹಾಡು ಬರೆಯುವಂತಹ ಆಫರ್ ಬಂದರೆ ಏನು ಮಾಡುತ್ತೀರಿ ಸಾರ್?*
ಹ್ಹ! ಅಟ್ಟದಲ್ಲಿರುವ ವಸ್ತುಗಳನ್ನೇ 'ಹಳೆ ಕುರ್ಚಿ, ಮುರ್ಕ್ಲಂಚ, ಕಿಲ್ಬಿದ್ ಚೆಂಬು, ಕಿತ್ತೋದ್ಬರ್ಕೆ' ಎಂದು ಬರೆದರೆ ಹಾಡು ರೆಡಿ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಸಾಯಲು ತೆಗೆದುಕೊಂಡ ವಿಷ ಡೂಪ್ಲಿಕೇಟ್ ಆದರೆ?*
ಚಿಂತಿಸಬೇಡಿ. ಒರಿಜಿನಲ್ ಎಂದು ಹೇಳಿ ನೀಡಿದ ಔಷಧಿ ತೆಗೆದುಕೊಂಡುಬಿಡಿ. ಆಸೆ ನೆರವೇರಿಬಿಡುತ್ತದೆ.

ಮುಕುಂದ ಹೆರಕಲ್ಲ, ಗುಲಬರ್ಗಾ
*ವಾತ್ಸಾಯನ ಋಷಿಯ ಹೆಸರಿನಲ್ಲಿ ಯಾವುದೇ ಗೋತ್ರ ಯಾಕಿಲ್ಲ?*
ಏಕೆಂದರೆ ಅವರು ಗೋತ್ರಪ್ರವರ್ತಕರಲ್ಲ, ಸೂತ್ರಪ್ರವರ್ತಕರು.

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಅತ್ತೆಯು ತನ್ನ ಸೊಸೆಗೆ ತಾಯಿ ಆಗುವುದು ಯಾವಾಗ?*



ಜಗಳ ತಾರಕಕ್ಕೇರಿದಾಗ ಸೊಸೆ 'ಅಯ್ಯೋ, ನಿನ್ನ ಸಹವಾಸ ಸಾಕಪ್ಪಾ ತಾಯೀ' ಎನ್ನುವ ಸಂದರ್ಭದಲ್ಲಿ!

ಬುಚ್ಚಿಬಾಬು, ಮಧುಗಿರಿ
*ದಿನ ಬೆಳಗಾದರೆ ಪತ್ರಿಕೆಗಳಲ್ಲಿ ಅತ್ಯಾಚಾರ, ಅಪಘಾತ; ಬಿಟ್ಟರೆ ಬೇರೆ ವಿಷಯವೇ ಇರುವುದಿಲ್ಲವಲ್ಲ?*
ವೃಥಾ ಖರ್ಚು ಮಾಡಬೇಡಿ. ತಿಂಗಳಿಗೊಮ್ಮೆ ದಿನಪತ್ರಿಕೆ ತರಿಸಿ ದಿನಾ ಅದನ್ನೇ ಓದಿಕೊಂಡುಬಿಡಿ.

ಕುಮಾರ ಚಲವಾದಿ, ಹೊಳೆನರಸಿಪುರ
*ನೀವು ಪ್ರೇಯಸಿಯ ಜೊತೆ ಇದ್ದಾಗ ನಿಮ್ಮಾಕೆ ನೋಡಿದರೆ?*
'ನಾನೇನೋ ತಿಳಿಯದೆ ಹಳ್ಳಕ್ಕೆ ಬಿದ್ದೆ. ನೀನೂ ಅನುಭವಿಸಬೇಕಲ್ಲಾ' ಎಂದು ಅವಳನ್ನು ತಬ್ಬಿ ಗೋಳೋ ಎಂದು ಅತ್ತುಬಿಡುತ್ತಾಳೆ!

■ ರಾಮ್